ಪಿಡಬ್ಲ್ಯೂ 01

ಪ್ರಮಾಣ ವಚನ ಭೋದಿಸಿದ ದಿನಾಂಕಃ 22-09-2022.

ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

1 ನೇ ಆರೋಪಿಯನ್ನು ಬಿಟ್ಟು ಬೇರೆ ಆರೋಪಿತರೊಂದಿಗೆ ಯಾವುದೇ ವ್ಯಾಜ್ಯ ಇಲ್ಲ ಎಂದರೆ ಹೌದು. ನಮ್ಮ ಮನೆಯಲ್ಲಿ ನಮ್ಮ ತಂದೆ , ಮತ್ತು ನಾವು 3 ಮಂದಿ ಅಣ್ಣ ತಮ್ಮಂದಿರು ಮೆಜಾರಿಟಿಗೆ ಬಂದ ಗಂಡಸರು ಇದ್ದೇವೆ ಎಂದರೆ ಹೌದು. ಅದೇ ರೀತಿ ನಮ್ಮ ತಾಯಿ , ನನ್ನ ಅಣ್ಣ ತಮ್ಮಂದಿರ ಹೆಂಡತಿಯರು ದೊಡ್ಡವರು ಇದ್ದಾರೆ ಎಂದರೆ ಹೌದು. 1 ನೇ ಆರೋಪಿಯ ಮನೆಯಲ್ಲಿ 1 ನೇ ಆರೋಪಿ , ಆತನ ಹೆಂಡತಿ ಮತ್ತು ಮಗು ಇದ್ದಾರೆ ಎಂದರೆ ಹೌದು. ಮಳ್ಳಿ ಮನೆತನದವರು ನಮ್ಮ ಊರಿನಲ್ಲಿ 13 ಮನೆಗಳು ಇವೆ ಎಂದರೆ ಹೌದು.

ನಾನು ಕೆಲಸಕ್ಕೆ ಹೋಗಿ ಮನೆಗೆ ಬಂದಾಗ ಸಂಜೆ 4-30 ಗಂಟೆ ಆಗಿತ್ತು . ಹಿತ್ತಲಲ್ಲಿ ಬೆಂಕಿ ಬಿದ್ದ ಬಗ್ಗೆ ಅದೇ ಸಂಜೆ 5-30 ಗಂಟೆಗೆ ಗೊತ್ತಾಗಿರುತ್ತದೆ. ಮಂಜಪ್ಪನ ಮನೆಯ ಮುಂದೆ 1 ನೇ ಆರೋಪಿ ಮತ್ತು ನಮ್ಮ ಅಣ್ಣ ತಮ್ಮಂದಿರೊಂದಿಗೆ ಸಂಜೆ 6-30 ಗಂಟೆಗೆ ಗಲಾಟೆ ಆಗಿರುತ್ತದೆ. ಆ ಸಮಯದಲ್ಲಿ ಸುಮಾರು 50 ಜನ ಸೇರಿದ್ದರು ಎಂದರೆ ಆರೋಪಿತರನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ ಎಂದು ನುಡಿಯುತ್ತಾರೆ. ಪ್ರಾ.ಸಾ-2 ರವರು ನಮ್ಮ ಜಗಳವನ್ನು ಬಿಡಿಸಿ ಅವರು ನನ್ನನ್ನು ಮತ್ತು ಚಾಸಾ-2 ರವರನ್ನು ನಮ್ಮ ಮನೆಗೆ ಬಿಟ್ಟು ಹೋಗಿರುತ್ತಾರೆ ಎಂದರೆ ಸರಿಯಲ್ಲ, ಆ ಸಮಯದಲ್ಲಿ ನಾನು ಮಾತ್ರ ಮನೆಗೆ ಬಂದಿರುತ್ತೇನೆ, ಚಾಸಾ-2 ರವರು ಸ್ಥಳದಲ್ಲೇ ಇದ್ದನು. ಪ್ರಾಸಾ -2 ಜಗಳ ಬಿಡಿಸಿದ ನಂತರ 1 ನೇ ಆರೋಪಿ ತನ್ನ ಮನೆಗೆ ಹೋದನು ಎಂದರೆ ಸರಿಯಲ್ಲ. ನಾನು , ನನ್ನ ತಮ್ಮ , ನನ್ನ ತಂದೆ ಜೆ ಸಿ ಬಿ ಯನ್ನು ತೆಗೆದುಕೊಂಡು ಹೋಗಿ 1 ನೇ ಆರೋಪಿಯ ಮನೆಯ ಹಿತ್ತಲಿಗೆ ಹೋಗಿ ಜೆ ಸಿ ಬಿ ಯಿಂದ 1 ನೇ ಆರೋಪಿಯ ಕೊಟ್ಟಿಗೆ ಹಾಳು ಮಾಡಿ 50 ಸಾವಿರ ರೂ . ಲುಕ್ಸಾನು ಮಾಡಿದ್ದೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 1 ನೇ ಆರೋಪಿ ತಡೆಯಲು ಬಂದಾಗ ನಾವು 4 ಮಂದಿ ಸೇರಿ ಆತನಿಗೆ ಹೊಡೆದು ಬಡಿದು ಹೆಚ್ಚಿನ ಹಿಂಸೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

ಸದರಿ ಜೆ ಸಿ ಬಿ ಯನ್ನು ನಾನೇ ಚಾಲನೆ ಮಾಡುತ್ತಿದ್ದು ಕೊಟ್ಟಿಗೆಯನ್ನು ಮುರಿದು ಜೆ ಸಿ ಬಿ ಯನ್ನು ಹಿಂದೆ ತೆಗೆದುಕೊಳ್ಳುವಾಗ ಜೆ ಸಿ ಬಿ ಯ ಬಕೆಟ್ ಚಾಸಾ-2 ರವರ ತಲೆಗೆ ತಾಗಿ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ಜೆ ಸಿ ಬಿ ಬಕೆಟ್ ತಾಗಿದ ಕೂಡಲೇ ಚಾಸಾ-2 ರವರು ಸ್ಥಳದಲ್ಲಿ ಬಿದ್ದಿರುತ್ತಾರೆ ಎಂದರೆ ಸರಿಯಲ್ಲ. ಪ್ರಾ.ಸಾ-3 ರವರು 1 ನೇ ಆರೋಪಿಯನ್ನು ಮೋಟರ್ ಸೈಕಲ್ ನಲ್ಲಿ ಸೊರಬದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದ ಎಂದರೆ ಸರಿಯಲ್ಲ.

ಚಾಸಾ-2 ರವರನ್ನು ಆಸ್ಪತ್ರೆಗೆ ದಾಖಲು ಮಾಡುವಾಗ ಯಾರು ಹೊಡೆದಿದ್ದಾರೆ ಎಂದು ಆಸ್ಪತ್ರೆಯಲ್ಲಿ ಮಾಹಿತಿ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರಿಗೆ ಯಾರೂ ಹೊಡೆಯದಿದ್ದ ಕಾರಣ ಇಂತವರೇ ಹೊಡೆದಿದ್ದಾರೆ ಎಂದು ಹೇಳಲಿಲ್ಲ ಎಂದರೆ ಸರಿಯಲ್ಲ. ನಾನು ದೂರನ್ನು ಪೋಲೀಸರಿಗೆ ಕೊಡುವಾಗ 2 ರಿಂದ 9 ನೇ ಆರೋಪಿತರು 1 ನೇ ಆರೋಪಿಯ ಜಾತಿಯವರಾದ ಕಾರಣ ಸದರಿಯವರು 1 ನೇ ಆರೋಪಿಗೆ ಸಹಾಯ ಮಾಡಬಹುದು ಎಂದು ಅವರನ್ನೆಲ್ಲ ಸೇರಿಸಿ ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ನಾನು ಮೊದಲ ಬಾರಿಗೆ ದೂರು ನೀಡುವಾಗ ಕಲಂ 307 ಐ ಪಿ ಸಿ ಬಗ್ಗೆ ಯಾವುದೇ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. 10 ತಿಂಗಳ ನಂತರ ಮರು ಹೇಳಿಕೆಯಲ್ಲಿ ಆರೋಪಿತರು ಕೊಲೆ ಮಾಡುವ ಉದ್ದೇಶದಿಂದ ಹಿಂದಿನ ದ್ವೇಷ ಇದೆ ಎಂದು ಸುಳ್ಳಾಗಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಸಲ ಹೇಳಿಕೆ ಕೊಡುವಾಗ ನಮ್ಮ ಮನೆಯವರು ಹಾಗೂ ಚಾಸಾ 10 ಮಹಾದೇವಪ್ಪ ಬಂದು ಜಗಳ ಬಿಡಿಸಿರುತ್ತಾರೆ ಎಂದು ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕಃ09-06-2019 ರ ಸಂಜೆ 6 ಗಂಟೆಗೆ ಮಂಜಪ್ಪನ ಮನೆ ಮುಂದೆ ನಾನು ಮತ್ತು ಚಾಸಾ-2, 1 ನೇ ಆರೋಪಿಗೆ ಅಡ್ಡ ಹಾಕಿ ಹಿಡಿದು ಎಳೆದಾಡುತ್ತಿದ್ದಾಗ ಸುಮಾರು 50 ಜನ ಸೇರಿದ್ದರು ಅವರೆಲ್ಲಾನಮ್ಮನ್ನು ಬಿಡಿಸಿ ನಮ್ಮ ಮನೆಗೆ ನಮ್ಮನ್ನು 1 ನೇ ಆರೋಪಿಯನ್ನು ಅವನ

ಮನೆಗೆ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಇದಾದ ನಂತರ 1 ನೇ ಆರೋಪಿ ಹಿತ್ತಲಲ್ಲಿ ಲೂಟಿ ಮಾಡಿ ಅವರ ಮನೆಗೆ ನುಗ್ಗಿ ಅವರನ್ನು ಹೊಡೆದಾಗ ಚಾಸಾ-2 ರವರಿಗೆ ಜೆ ಸಿ ಬಬಿ ಬಕೆಟ್ ತಾಗಿದ್ದು , ಮಂಜಪ್ಪ ರವರ ಮನೆಯ ಹತ್ತಿರ ಆರೋಪಿತರು ನಮ್ಮನ್ನು ಹೊಡೆದರು ಎಂದು ಕಥೆ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).